ಅಂದ್ಕೋಳ್ಳೋಣಾ..?'

'ಐಷಾ.'

'ಉಮ್ಮಾ.'

'ಯಾವಾಗ ನೀ ವಾಪಾಸಾಗ್ತೀಂತಾ ನಾವ್ ಅಂದ್ಕೋಳ್ಳೋಣಾ..?'

'ನಂಗೊತ್ತಿಲ್ಲ ಉಮ್ಮಾ. ಬಹುಶಃ ಮುಂದಿನ್ ರಮಜಾನ್ ಹೊತ್ಗೆ...'

'ಒಳ್ಳೆದಪಾ.'

'ಸರಿ ಹಾಗಾದ್ರೆ, ನಾ ಹೊರ್ಟೆ.'

'ಅಲ್ಲಾಹ್ ಕೃಪೆ.'

'ಪ್ರವಾದಿ ಅಲ್ಲಾಹ್ ನಿಮ್ಮನ್ನೆಲ್ಲಾ ಕಾಪಾಡಲಿ.'

ಅಸನಮ್ಮ ನೇರ ಹಾಸಿಗೆಗೆ ಹೋದಳು, ಮಲಗಲು ಅಲ್ಲ. ಅವಳು ಹೇಗೆ ತಾನೇ ಮಲಗಲು ಸಾಧ್ಯ? ಬೆಳಗಿನ ಜಾವದಲ್ಲೂ ಅವಳ ಕಣ್ಣುಗಳು ಹಂಗೇ ದೊಡ್ಡದಾಗಿ ತೆರೆದುಕೊಂಡಿದ್ದವು.

'ಇಂತಾ ಕೊಳೆತ ಹಾಳ್ ಗಂಡಸ್ರಿಂದ್ಲೇ ಅವ್ನಾ ಕುಟುಂಬಯೇನಾದ್ರೂ ಹೆಸರುವಾಸಿಯಾ? ಖಂಡಿತಾ ಇರ್ಲಿಕ್ಕಿಲ್ಲ. ನಮ್ಮ ಹೆಣ್ ಮಕ್ಳ ದುರಾದೃಷ್ಟಕ್ಕೆ ನಮ್ ಹಣೇಬರಹವೇ ಕಾರಣ. ಅವ್ರೊಳಗೇ ಏನಾರ ಊನವಿರ್ಬೇಕು... ಇಲ್ಲಾಂದ್ರೆ ಹೆಂಗೆ ನಮ್ ಗಂಡಸ್ರನ್ನ ನಮ್ಹತ್ರ ಹಿಡಿದಿಟ್ಕೊಳ್ಳಕ್ಕೆ ನಮಗಾಗ್ತಿಲ್ಲ? ಅಲ್ಲಾಹ್, ಹೆಂಗೆ ಇವೆಲ್ಲಾ ಆಗುತ್ತೆ?

'ಇಪ್ಪತ್ತು ವರ್ಷಗಳ ಹಿಂದೆ. ಇಪ್ಪತ್ತು ವರ್ಷ ಅಲ್ವಾ, ಅಥ್ವಾ ಇಪ್ಪತ್ತು ವರ್ಷಗಳಿಗಿಂತಾ ಜಾಸ್ತಿನಾ... ಬಹುಶಃ ಇಪ್ಪತ್ತು ವರ್ಷಗಳಿಗಿಂತಾ ಜಾಸ್ತಿಯಿರ್ಬೇಕು, ಅಲ್ಲಾಹ್, ದಯೆಯಿರಲಿ, ಹವಾಗೆ ಹೇಳೋಕ್ಕೆ ನಂಗೆ ಶಕ್ತಿ ಕೊಡು.

'ಅಥ್ವಾ ನಾನೀಗ ಸಂತೆಗೆ ಹೋಗಿ ವಾಪಾಸ್ ಬಂದ್ಮೇಲೆ ಅವಳ್ಗೆ ಹೇಳ್ಲಾ? ಬ್ಯಾಡಾ... ಹವಾ, ಹವಾ, ಅದ್ ಹ್ಯಾಂಗೆ ಇಲ್ಲಿ ನೀ ಮರದ ಕೊರಡ್ನಂಗೆ ಕಾಲ್ಚಾಚಿ ಮಲಗಿದೀಯಾ! ತಾಯಿ ನಿದ್ರೆಯೆಂದ್ರೆ ಹಿಂಗೇಯೇನು? ಹವಾ, ಹವಾ...! ಓಹ್, ನಿನ್ನೊಬ್ಬನ್ನೇ ಬಿಟ್ ನಾ ಹೋಗ್ಲಾರೆ... ಆಮ್ಯಾಲೆ ನಿದ್ದೇಲಿ ನೀಯೇನಾದ್ರೂ ಸತ್ತ್‌ಗಿತ್ತ್ ಹೋದ್ರೆ, ನಿನ್ಮಗು ರಾತ್ರಿಯೇನಾದ್ರೂ ಅತ್ರೆ, ಅದ್ ಹೆಂಗೆ ನಿಂಗ್ ಕೇಳುತ್ತೇಳು?

'ನನ್ನನ್ನು ಪ್ರಶ್ನಿಸೋ ನಿನ್ಮಾತು ನಾ ಕೇಳ್ಬೇಕಾ! ಹೌದು, ಇದೀಗ ಬೆಳ್ಳಂಜಾವ. ನೀ ನಿಜಕ್ಕೂ ಸತ್ತೇ ಹೋದ್ಯೇನೋ ಅಂದ್ಕೊಂಡೆ. ಚಳಿಯೆನಿಸಿದ್ರೆ ಹೊದಿಕೇನ ಹೊದ್ಕೊಂಡ್ ನಾ ಹೇಳೋದನ್ನಾ ಕೇಳು. ಯಾಕಂದ್ರೆ ನಾ ನಿಂಗೇನೋ ಹೇಳ್ಬೇಕು ಮಗಳೇ.

'ಹವಾ, ಐಷಾ ದಕ್ಷಿಣದ ಕಡ್ಗೆ ಹೋದ.

'ಅದ್ಯಾಕೆ ನನ್ಕಡೆ ನೀ ಹಂಗೆ ಮಿರುಗೋ ಕಣ್ಣಿಂದ ದಿಟ್ಟಿಸಿ ನೋಡ್ತಾಯಿದೀಯಾ. ಐಷಾ ದಕ್ಷಿಣದ ಕಡೆ ಹೋದಾಂತಾ ನಿಂಗ್ ನಾ ಹೇಳ್ತಿರೋದು.

'ಮತ್ಯಾವ ಪ್ರಶ್ನೇನ ನಂಗೆ ಕೇಳಬೇಕೂಂತಾ ನೀ ಯೋಚಿಸ್ತಿದ್ದೀ? ಹೊಕ್ಳ ಗಾಯಯಿನ್ನೂ ಮಾಯದ ಕೂಸು ನಿಂಗಿರ್ವಾಗ ತನ್ನ ಜೊತೆ ಅವನ್ ನಿನ್ ಹ್ಯಾಂಗ್ ಕರ್ಕೊಂಡು ಹೋಗ್ತಾನ್ ಹೇಳು?

'ನಿನ್ನೆ ರಾತ್ರಿನೇ ಅವನ್ ಹೊರ್ಟೋದ.

'ನಾನ್ಯಾಕೆ ಬಂದ್ ನಿನ್ನ ಎಬ್ಬಿಸ್ಲಿಲ್ಲಾಂತಾ ನನ್ನ ಕೇಳಬ್ಯಾಡ. ಯಾವುದಕ್ಕಾಗಿ ನಾ ನಿನ್ನ ಎಬ್ಬಿಸ್ಬೇಕಿತ್ತು ಹೇಳು? ಇಲ್ ಕೇಳ್, ಐಷಾ ಹೇಳ್ದ, ನೀನೂ, ಹುಸೇನಿಯೂ ಹಸ್ಕೊಂಡು ಇರೋದ್ನ ಸುಮ್ನೆ ನೋಡ್ತಾ ಇಲ್ಲಿರೋಕೆ ಅವ್ನಿಗಾಗಲ್ವಂತೆ.

'ಅವ್ನು ಕೆಲ್ಸ ಹುಡ್ಕೊಂಡ್ ದಕ್ಷಿಣದ್ ಕಡೆ ಹೊರ್ಟಿದ್ದಾನೆ, ಆಮ್ಯಾಲೆ... ಹವಾ, ಎದ್ ಎಲ್ಗೆ ಹೋಗ್ಬೇಕ್ಕಂತಾ ಆಂದ್ಕೊಂಡ್ದೀಯಾ? ಐಷಾಯೇನ್ ನಿನ್ಗೋಸ್ಕರ ಬಾಗ್ಲ ಹತ್ರ ಕಾಯ್ತಾಯಿಲ್ಲ. ಇನ್ನೂ ಅಕ್ಕಪಕ್ಕದೋರ್ಯಾರೂ ಎದ್ದಿಲ್ಲ, ನನ್ನ ಕಿರಿಚ್ಕೊಳ್ಳೋ ಹಂಗೆ ಮಾಡ್ಬೇಡಾ... ಮತ್ಯಾಕ್ ಮಗು ತರ ಮಾಡ್ತೀಯಾ? ನೀನೀಗ ತಾಯಿ, ದೊಡ್ಡೋರ್ತ್ರ ಹಂಗೆ ನಡ್ಕೊಳ್ಳದನ್ನಾ ಕಲಿ... ಎಲ್ಗೆ ಹೋಗ್ಬೇಕೂಂತಾ ಏಳ್ತಿದೀಯಾ? ನಾ ಹೇಳೋದ್ ಕೇಳ್, ನಿಂಗೇ ಹೇಳ್ತಿರೋದು, ಐಷಾ ಹೋದ. ನಿನ್ನೆ ರಾತ್ರಿನೇ ಹೊರ್ಟೋದ, ಯಾಕಂದ್ರೆ ಬೆಳ್ಗಿನ್ ಜಾವ ತಮಾಲೆಯಿಂದ ಹೊರಡೋ ಸರ್ಕಾರಿ ಬಸ್ ಹಿಡಿಯೋಕ್ಕೆ. ಅದ್ಕೇ...

'ಹವಾ, ಹುಷ್... ಹುಷ್, ಅಳ್ತಿದ್ದೀಯೇನ್ ನೀನ್? ಯಾಕಳ್ತಿ? ನಿನ್ಗಂಡ ನಿನ್ ಬಿಟ್ ಹೋಗಿದ್ದು ಕೆಲ್ಸಕ್ಕಲ್ಲವೇನ್? ಹೋಗ್, ಹೋಗಿ ಅಳ್ತಾ ಕೂತ್ಕೋ, ಯಾಕೆಂದ್ರೆ, ಅವ್ನು ದುಡ್ಡು ತರ್ತಿರೋದು ನನ್ ನೋಡ್ಕಳ್ಳಕ್ಕೆ ನೋಡ್, ನಿಂಗ್ ಅಲ್ಲವಲ್ಲಾ...

'ನಂಗೆಂತದೂ ತಿಳೀಯೊಲ್ಲ ಅಂತೀಯೇನ್? ಇದ್ರೂ ಇರ್ಬೋದು, ಇಲ್ಲವೇನೋ... ನೋಡ್, ನೀನೀಗ ಹುಸೇನಿನೂ ಎಬ್ಬಿಬಿಟ್ಟೆ. ಎದ್ದು ಕೂತು ಅದ್ಕೆ ಹಾಲು ಕೊಟ್ಟು ನಾ ಹೇಳೋದ್ ಕೇಳ್.

'ನಾ ಹೇಳೋದ್ ಕೇಳ್, ಮತ್ತೊಬ್ಬ ಮನುಷ್ಯ ಆಗಷ್ಟೇ ಹುಟ್ದ ತನ್ನ ಮಗೂನ ಬಿಟ್ ಹೊರ್ಟೋಗಿದ್ದನ್ನಾ ನಿಂಗೆ ಹೇಳ್ತೀನಿ.

'ಅವ್ನು ವಾಪಾಸ್ ಬಂದ್ನೇ? ಇಲ್ಲಾ... ಅವ್ನು ವಾಪಾಸ್ ಬರ್ಲಿಲ್ಲ. ಆದ್ರೆ ಮತ್ಯಾವ ಪ್ರಶ್ನೇನೂ ಕೇಳ್ಬೇಡ, ಯಾಕೆಂದ್ರೆ ನಾನೇ ನಿಂಗೆಲ್ಲಾ ಹೇಳ್ತೀನಿ.

'ಆದ್ರವನು ಹೋಗಿ ಬರೋದ್ ಮಾಡ್ತಾಯಿದ್ದ. ಒಂದ್ ದಿವ್ಸ ಹಂಗೆ ಹೋದವ್ನು ಮತ್ಯಾವತ್ತೂ ವಾಪಾಸ್ ಬರ್ಲಿಲ್ಲ. ಉಳಿದೋರ್ತ್ರ ಹಂಗೆ ಅವ್ನಿಗೇನೂ ಹೋಗ್ಲೇಬೇಕಂತೇನ್ ಇರ್ಲಿಲ್ಲ...

'ಓ... ಅವ್ರೆಲ್ರೂ ಸೈನಿಕ್ರು. ನಾ ಹೇಳ್ತಿರೋದೂ ಅಂತಾ ಒಬ್ಬ ಸೈನಿಕನಾ ಮ್ಯಾಲೆ. ಅವ್ನೇನೂ ಸೈನಿಕ್ನಾಗ್ಬೇಕಾಗಿರ್ಲಿಲ್ಲ. ಅಷ್ಟಕ್ಕೂ ಅವ್ನಪ್ಪ ಈ ನಾಡಿನ ಅತಿ ಶ್ರೀಮಂತರಲೊಬ್ಬನಾಗಿದ್ದ. ಅವ್ನೇನೂ ಹಿರೇ ಮಗನೇನಲ್ಲ ನಿಜ, ಆದ್ರೆ ಮದ್ವೇಂತಾ ಅದ್ಮೇಲೆ ತನ್ನನ್ನೂ ತನ್ನ ಹೆಂಡ್ತಿನೂ ನೋಡ್ಕೊಳ್ಳೊಕ್ಕೆ ಅವ್ನೇನ್ ಬೇಕಾದ್ರೂ ಮಾಡ್ಲಿಕ್ಕೆ ಸಾಧ್ಯಯಿತ್ತು. ಆದ್ರೆ ಬೇರೆಯವ್ರ ಮಾತನ್ನ ಅವ್ನು ಕೇಳ್ಬೇಕಾಗಿರ್ಲಿಲ್ಲ. ಬ್ಯಾರೆ ಹುಡುಗ್ರು ತಮ್ ಚಾಲೂಕುತನ ತೋರುಸ್ತಿರೋವಾಗ ಅವ್ನಾದ್ರೂ ಸುಮ್ನೆ ಕೂತ್ಕೊಂಡ್ ನೋಡ್ತಿರೋಕ್ಕಾಗುತ್ತಾ ಹೇಳ್?

'ಅವ್ರ ಬಟ್ಟೆಗಳೋ, ಇಸ್ತ್ರಿ ಮಾಡೀ ಮಾಡೀ ಹೊಳೀತಿದ್ವು... ಅವರಲ್ಲಿ ಯಾರ್ನ ನೋಡಿದ್ರೂ ನಮ್ಕಣ್ಣಿಗೆ ಒಂದೇ ತರ ಕಾಣ್ತೋರು. ಮತ್ತವ್ರ ಬೂಟ್ಗಳೂ, ಮತ್ತದ್ರ ಅಬ್ಬರದ ಸದ್ದೂ! ಸೈನಿಕರೆಂದ್ರೆ ನಿಂಗೂ ಗೊತ್ತಲ್ಲಾ. ಓಹ್, ದಕ್ಷಿಣದಿಂದ ಅವ್ರಿಲ್ಲಿಗೆ ಬರ್ತ್ತಿದ್ದಂಗೇ ನೆಲದಲ್ಲೇಳ್ತಿದ್ದ ಕೋಲಾಹಲ! ಅಮ್ಮಂದ್ರೆಲ್ಲಾ ತಂತಮ್ಮ ಮಗಳೊಟ್ಟಿಗೆ ಯೋಗ್ಯ ಮದ್ವೆಯ ಹಿರಿಮೆ ಕುರಿತು ಉದ್ದೂದ್ದಕ್ಕೆ ಬಿರುಸಾಗಿ ಮಾತಾಡ್ತಿದ್ದರೆ, ಅಪ್ಪಂದ್ರೆಲ್ಲಾ ಮದ್ವೆ ತೀರ್ಮಾನದ ಅವಸ್ರದಲ್ಲಿರ್ತಿದ್ದರು. ತುಂಬಾ ಜನ್ರಿಗೆ ಮೆಮೋನತ್‌ನಂತಾ ಪ್ರಕರಣ ಎಲ್ಲಾದ್ರೂ ಸಿಕ್ಕಿಬಿಟ್ರೇಂತಾ ಹೆದ್ರಿಕೆ. ಅವ್ಳಪ್ಪ ಜಾನುವಾರುಗಳ ಜೊತ್ಗೆ ಎಲ್ಲಾನೂ ತೆಕ್ಕೊಂಡ, ಆಮ್ಯಾಲೆ ಮೆಮೋನತ್ ಸೈನಿಕನೊಬ್ಬನ ಜೊತೆ ಓಡ್ಹೋಗಿ ಚಕ್ಕಂದವಾಡಿದ್ಳು. ಅಬ್ಬಾ, ಆಗ ಅವಳೆಬ್ಬಿಸಿದ ವದಂತಿಗಳೆಂದ್ರೆ..!

'ಯಾರ್ರೀ ಮೆಮೋನತ್ ಅಂತೀಯಾ? ಅಲ್ಲಪಾ, ಅವ್ಳೇನ್ ನಿನ್ ಗೆಳತಿ ಅಮ್ಮಯೇನಲ್ಲಾ. ಅಲ್ಲಾ, ಕಡೀಗೆ ಈ ಮೇಮೋನತ್ತೂ ಕೂಡಾ ದಕ್ಷಿಣದ ಕಡ್ಗೆ ಓಡಿ ಹೋದಳಲ್ಲಾ. ನಗರಕ್ಹೋಗಿ ಕೆಟ್ ಹೆಣ್ಣಾಗಿ ಬಾಳಿ ತುಂಬಾ ದುಡ್ಡು ಮಾಡಿದ್ಲಂತಾ ನಾವ್ ಕೇಳಿದ್ದಷ್ಟೇ.

'ಇಲ್ಲಾ... ಈಗಂತೂ ಅವ್ಳ ಬಗ್ಗೆ ನಾವೆಂತೂ ಕೇಳೇಯಿಲ್ಲ. ಅವ್ಳಿನ್ನೂ ಸತ್ತಿರ್ಲಿಕ್ಕಿಲ್ಲ ಅನ್ಕೋತೀನಿ. ಯಾಕಂದ್ರೆ ಅಂತಾ ಹೆಂಗಸ್ರೆಲ್ಲಾ ಸಾಯೋ ಕಾಲಕ್ಕೆ ತಮ್ ಮನೆಗಳ್ಗೆ ಬರ್ತ್ತಾರೇಂತಾ ಅಲ್ವಾ ನಾವ್ ಕೇಳಿರೋದು. ಅವ್ಳಿನ್ನೂ ಇಲ್ಲಿಗ್ ವಾಪಾಸ್ ಬಂದಿಲ್ಲ.

'ಆದ್ರೆ ನಾವ್, ನಾವ್ ಬೇರೇನೇ ಬಿಡು. ನಾನೇನೂ ಮದ್ವೆನಾ ಆ ರೀತೀಲಿ ನಿಕ್ಕಿ ಮಾಡ್ಕಂಡಿರ್ಲಿಲ್ಲ.

'ನಾನ್ಯಾಕೆ 'ನಾವು' ಅಂತಂದೆಯೆಂತಾ ನೀ ಕೇಳ್ತೀಯಾ? ಯಾಕೇಂದ್ರೆ ಈ ಮನುಷ್ಯನೇ ನಿಮ್ಮಪ್ಪ. ಆಹಾ... ಹಾ... ಕಣ್ಣೂ, ಬಾಯಿ ದೊಡ್ಡಾಗಿ ಬಿಡ್ತಿದ್ದೀಯಾ ಅಲ್ವಾ? ಹೌದು, ನನ್ ಕೂಸೇ, ಈ ನಿನ್ನಪ್ಪನ್ ಬಗ್ಗೆಯೇ ನಾ ಹೇಳ್ತಿರೋದು.

'ಇಲ್ಲಾ, ಅಂವಾ ಸತ್ತಾಂತ ನಿಂಗ್ ನಾ ಹೇಳಿದ್ದೇನೂ ಸುಳ್ಳಾಗಿರ್ಲಿಲ್ಲ. ಆದ್ರೆ ಶಾಂತವಾಗ್ ಕೇಳ್ಸಿಕೊ. ಮದ್ವೆ ಮಾಡ್ಕೊಂಡ ಸೈನಿಕರಿಗೆ ಮನೆ ಕೊಡ್ತಾರೇಂತಾ ಕೇಳಿ ಅದನ್ನಾ ಪಡ್ಕಳೋಕ್ಕೆ ಅವ್ನು ದಕ್ಷಿಣದ್ ಕಡ್ಗೆ ಹೊರ್ಟಿದ್ದ.

'ಅಲ್ಲಾ, ಆಗ ಹೋದವ್ನು ಹಿಂದಕ್ಕೆ ಬರ್ಲಿಲ್ಲಾಂತ ಅಲ್ಲ. ಅವ್ನು ಬಂದ, ಆದ್ರೆ ನನ್ನ ಕರ್ಕೊಂಡ್ ಹೋಗಾಕಲ್ಲ.

'ಯುದ್ಧದ ಬಗ್ಗೆ ನಾವೇನಾದ್ರೂ ಕೇಳಿದ್ದೀವಾಂತಾ ನಮ್ಮನ್ನಾ ಕೇಳ್ದ.

'ಯುದ್ಧದ ಬಗ್ಗೆ ನಾವ್ ಕೇಳಿರ್ಲಿಲ್ಲೇನು? ಬಟ್ಟೆ, ಸೀಮೆಯೆಣ್ಣೆ, ಡಬ್ಬದ ಮೀನುಗಳಂತಾ ವಸ್ತುಗಳ್ ಸಿಗೋದು ನಮ್ಗೂ ಕಷ್ಟವಾಗಿರ್ಲಿಲ್ಲವೇನು?

'ಹೌದೂಂತಾ ಅಂದ್ವಿ. ಆದ್ರೆ ಮಾರಾಟ ಮಾಡೋರು ತರ್ತಾಯಿಲ್ಲವೇನೋ, ಅದ್ಕೆ ಅವೆಲ್ಲಾ ಸಿಗ್ತಾಯಿಲ್ಲವೇನೋಂತಾ ನಾವಂದ್ಕೊಂಡಿದ್ವೀಂತಾ ಹೇಳಿದ್ವಿ.

'ಅದೇನೋ ಹೌದು, ಅವನಂದ. ಆದ್ರೆ ದಕ್ಷಿಣದಲ್ಲೂ ಮಾರಾಟಗಾರ್ರಿಗೆ ಅವೆಲ್ಲಾ ಸಿಕ್ತಾಯಿಲ್ಲಾ.

'ಹೌದಾ, ಯಾಕೆ, ನಾವು ಕೇಳಿದ್ವಿ.

'ನೀವೆಂತಾ ಜನ್ರು, ನೀವ್ಯಾರೂ ಜರ್ಮನ್ನರ್ರ ಬಗ್ಗೆ ಕೇಳಿಲ್ಲೇನು?